ಡಾ|| ವೈ. ನಾಗಪ್ಪ :- ನಾಳೆ ಕನ್‌ಸ್ಟ್ರಕ್ಷನ್ ಸ್ಟಾರ್ಟ್ ಮಾಡುತ್ತೀರಾ ?
(ಉತ್ತರ ಇಲ್ಲ).

ದಸೂಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ

735. ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ ?

ಅ) ದಸೂಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಜಿಲ್ಲಾ ಪರಿಷತ್ತಿನ ಅನುಮೋದನೆ ದೊರೆತಿದ್ದರೂ ಸಹ ಇದುವರೆವಿಗೂ ಮಂಜೂರಾತಿ ದೊರೆಯದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ವಿಳಂಬಕ್ಕೆ ಕಾರಣವೇನು ?

ಇ) ಆರೋಗ್ಯ ಕೇಂದ್ರ ಸ್ಥಾಪನೆಗೆ ಅನುಮತಿಯನ್ನು ಸರ್ಕಾರ ಎಂದಿನಿಂದ ಕೊಡಲಿಚ್ಚಿಸಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಬಂದಿದೆ

ಆ) ಸಾರ್ವಜನಿಕರು ಹಾಗೂ ಶಾಸಕರು ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲು ಸಲ್ಲಿಸಿದ ಕೋರಿಕೆ ಹಾಗೂ ಜಿಲ್ಲಾ ಪರಿಷತ್ತಿನಿಂದ ಬಂದ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅವಶ್ಯಕತೆಯಿರುವ ಸ್ಥಳಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ.

ಇ) 1992-93 ರಲ್ಲಿ ಈ ಪ್ರಸ್ತಾವನೆಯನ್ನು ಪುನರ್ ನವೀಕರಿಸಿದರೆ ಮಂಜೂರಾತಿಯನ್ನು ಪರಿಶೀಲಿಸಲಾಗುವುದು.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಸಭಾಧ್ಯಕ್ಷರೆಯವರೇ, ನನ್ನ ಪ್ರಶ್ನೆಗೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸ್ಥಾಪಿಸಲು ಜಿಲ್ಲಾ ಪರಿಷತ್ ಅನುಮೋದನೆ ದೊರೆತಿದ್ದರೂ ಸಹ ಇದುವರಗೆ ಮಂಜೂರಾತಿ ದೊರೆಯದೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ, ಬಂದಿದೆ ಎಂದು ಹೇಳಿದ್ದಾರೆ. ಹಾಗಾದರೆ ವಿಳಂಬವಾಗುವುದಕ್ಕೆ ಕಾರಣ ಏನು? ಮಂಜೂರಾತಿ ಆಗದಿರುವುದಕ್ಕೆ ಎಂದರೆ, ಜಿಲ್ಲಾ ಪರಿಷತ್ತಿನಿಂದ ಬಂದ ಪ್ರಸ್ತಾವನೆಗಳನ್ನು ಪರೀಶೀಲಿಸಿ ಅವಶ್ಯಕತೆ ಇರುವ ಸ್ಥಳಗಳಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮಂಜೂರಾತಿ ಮಾಡಲಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದರಿಂದ ಅರ್ಥವಾಗತಕ್ಕದ್ದು ಇಷ್ಟು. ಈಗಾಗಲೇ ಅದ್ಯತೆ ಮೇಲೆ ಕೊಟ್ಟು ಬಿಟ್ಟಿದ್ದಾರೆ, ಈ ಊರಿಗೆ ಕೊಟ್ಟಿಲ್ಲ ಎಂಬ ಅಭಿಪ್ರಾಯ ಹೇಳುತ್ತಿದ್ದಾರೆ. ಅದನ್ನು ನೇರವಾಗಿ ಹೇಳಬಹುದು. ಸನ್ಮಾನ್ಯ ಸಚಿವರಲ್ಲಿ ಒಂದು ವಿಷಯ ಪ್ರಸ್ತಾಪ ಮಾಡುವುದಕ್ಕೆ ಇಚ್ಛಿಪಡುತ್ತೇನೆ. ಏನು ದಸೂಡಿ ಎಂಬ ಊರಿದೆ ಇದು ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿದೆ. 1978ನೇ ಜನಗಣತಿ ಆಧಾರದ ಮೇಲೆ ಇದನ್ನು ವೇಕೆಂಟ್ ಬ್ಲಾಕ್ ಎಂದು ಹೇಳಿದ್ದಾರೆ. ಅದರಲ್ಲಿ ಬಹುತೇಕ ಹರಿಜನ ಮಾತ್ರ ಬರತಕ್ಕವರು. ಬೇರೆ ಇನ್ನು ಯಾರೂ ಬರತಕ್ಕವರಲ್ಲ, ಅದು ಒಂದು ಗಡಿ ಪ್ರದೇಶ. ಯಾವ ರೀತಿ ಇದು ಗಡಿ ಅಂದರೆ ಹಿರಿಯೂರು ತಾಲ್ಲೂಕು ಮತ್ತು ಹೊಸದುರ್ಗ ತಾಲ್ಲೂಕುಗಳ ಗಡಿಯಲ್ಲಿರತಕ್ಕಂಥ ಒಂದು ಪ್ರದೇಶ ಅದು. ಗುಡ್ಡಗಾಡು ಪ್ರದೇಶದಲ್ಲಿರತಕ್ಕಂಥವರು ಹಿಂದುಳಿದ ವರ್ಗದ ಜನರು ಆಲ್ಲಿರತಕ್ಕಂಥವರು ಆಲ್ಲಿಗೆ ಆಸ್ಪತ್ರೆ ಕೊಡಬೇಕೆಂದು ಸುಮಾರು 15 ವರ್ಷಗಳಿಂದ ಕೋರಿಕೆ ಇಟ್ಟಿದ್ದಾರೆ. ಅದು ವೇಕೆಂಟ್ ಬ್ಲಾಕ್ ಎಂದು ಹೇಳಿ ಅಂದೆ ತೀರ್ಮಾನ ಆಗಿದೆ. ಮತ್ತು ಈಗಾಗಲೇ 1990-91ನೇ ಸಾಲಿನಲ್ಲಿ ಆಸ್ಪತ್ರೆ ಕೂಡ ಮಂಜೂರಾಗಿದ್ದು ಏತಕೋಸ್ಕರ ಅದನ್ನು ಶಿಫ್ಟ್ ಮಾಡುವ ನಿರ್ಧಾರ ಮಾಡಿದರೋ ಗೊತ್ತಿಲ್ಲ, ಬಹುಶಃ ಹರಿಜನ ಮತ್ತು ಗಿರಿಜನರು ಇರತಕ್ಕಂಥ ಕಡೆ ಆಸ್ಪತ್ರೆ ಕೊಡಬಾರದು ಎನ್ನತಕ್ಕಂಥ ನಿಲುವು ಏನಾದರೂ ತೆಗದುಕೊಂಡಿದ್ದೀರೋ ಹೇಗೆ ?

ಉಪಾಧ್ಯಕ್ಷರೆಯವರು :- ಪ್ರಶ್ನೆ ಕೇಳಿ ...

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಅಧ್ಯಕ್ಷೆಣೆಯವರೇ ನಾನು ಇದರಲ್ಲಿ ಉಪಪ್ರಶ್ನೆ ಕೇಳುವುದು ಏನೂ ಇಲ್ಲ, ನೇರವಾಗಿ ಮಂತ್ರಿಗಳ ಉತ್ತರವನ್ನು ಬಯಸುತ್ತೇನೆ. ಆದ್ದರಿಂದ ನಾನು ಒಂದೇ ಸಾರಿ ಕೇಳಿಬಿಡುತ್ತೇನೆ. ದಯಮಾಡಿ ಇಲ್ಲಿ ಹರಿಜನ ಮತ್ತು ಗಿರಿಜನರು ಬಿಟ್ಟು ಬೇರೆ ಜನರು ಇಲ್ಲ, ಈಗಾಗಲೇ ಆಸ್ಪತ್ರೆ ಮಂಜೂರು ಮಾಡಿ ಆಸ್ಪತ್ರೆ ಪ್ರಾರಂಭ ಮಾಡಿ ಬೇರೆ ಕಡೆ ಶಿಫ್ಟ್ ಮಾಡತಕ್ಕಂಥ ಪ್ರಯತ್ನ ನಡೆದಿದೆ. ಅದಕ್ಕೆ ಕಾರಣವೇನು ಎಂದು ನಾನು ಕೇಳತಕ್ಕಂಥಾದ್ದು. ಕಾರಣ ತಮಗೂ ಸಹ ಗೊತ್ತಿದೆ. ಅದಕ್ಕೆ ನಾನು ನೇರವಾಗಿ ತಮ್ಮನ್ನು ಕೇಳುತ್ತೇನೆ. ನಿಜವಾಗಿಯೂ ಕೂಡ ಇದನ್ನು ಅದ್ಯತೆ ಮೇಲೆ ನೀವು ಕೊಟ್ಟಿದ್ದೇ ಆದರೆ ಅದನ್ನು ಬಿಟ್ಟು ಬೇರೆ ಯಾವ ಊರಿಗೂ ಕೊಡುವುದಕ್ಕೂ ಆಗಿಲ್ಲ, ದಯಮಾಡಿ ಒಂದು ಅರಿಕೆ. ದಯಮಾಡಿ ಇನ್ನು ಮೇಲೆ ಇಲಾಖೆಯವನು ಎಷ್ಟೇ ಸಲಹೆ ಕೊಟ್ಟರೂ ಆ ಸಲಹೆಗಳಲ್ಲಿ ಎಷ್ಟು ಬೇಕೋ ಅಷ್ಟನ್ನು ಮಾತ್ರ ತೆಗೆದುಕೊಳ್ಳಬೇಕು. ದಯಮಾಡಿ ಅವರ ಸಲಹೆ ಒಂದು ಕಡೆ ಇಟ್ಟು ಇವತ್ತು ತಾವೇ ಹಿಂದಿನ ಸಭೆಯಲ್ಲಿ ಏನು ಆಶ್ವಾಸನೆ ಕೊಟ್ಟಿದ್ದೀರಿ ಅದರಂತೆ 1991-92ನೇ ಸಾಲಿನಲ್ಲಿ ಇದನ್ನು ಮಂಜೂರು ಮಾಡಿಕೊಡಬೇಕು. ಹಿಂದೆ ಈ ಮಾತನ್ನು ಹೇಳಿ ಈಗ 1992-93ನೇ ಸಾಲಿನಲ್ಲಿ ಕೊಡುತ್ತೇನೆಂದು ಹೇಳತಕ್ಕಂಥ ಮಾತು ಹೇಳುವುದಾದರೆ ಮಾನ್ಯ ಸಚಿವರು ತಾವೆ ಹಿಂದೆ ಉತ್ತರ ಕೊಟ್ಟಿರತಕ್ಕಂಥ ಆಶ್ವಾಸನೆಯನ್ನು ಉಳಿಸಿಕೊಳ್ಳುವುದಕ್ಕೆ ಪ್ರಯತ್ನಮಾಡಬೇಕು. ದಯಮಾಡಿ ನನ್ನ ಕ್ಷೇತ್ರದ ಮೇಲೆ ಮಾನ್ಯ ಸಚಿವರಿಗೆ ಮನಸ್ಸು ಇದ್ದಂತೆ ಕಾಣುವುದಿಲ್ಲ, ಆ ಮನಸ್ಸು ಬಿಟ್ಟು ಆಸ್ಪತ್ರೆ ಮಂಜೂರು ಮಾಡತಕ್ಕಂಥ ಘೋಷಣೆ ತಾವು ಮಾಡಿದರೆ ನಾನು ನಿಜವಾಗಿಯೂ ಈ ಸರ್ಕಾರವನ್ನು ಮಾನ್ಯ ಸಚಿವರನ್ನು ಮೆಚ್ಚುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ಸನ್ಮಾನ್ಯ ಅಧ್ಯಕ್ಷೆಣೆಯವರೇ ಸನ್ಮಾನ್ಯ ಜಯಚಂದ್ರರವರ ಕ್ಷೇತ್ರದ ಬಗ್ಗೆ ನನಗೆ ಆನಾಸಕ್ತಿ ಏಂತೂ ಇಲ್ಲ, ಅವರು ಈ ಸಂಶಯಕ್ಕೆ ಎಡೆ ಕೊಡತಕ್ಕಂಥ ಸಂದರ್ಭ ಯಾವುದೂ ಇಲ್ಲ, ವೈದ್ಯಕೀಯ ಕ್ಷೇತ್ರದಲ್ಲಿ ಮೊನ್ನೆ ತಾನೇ ಕೇಳಿದಂತಹ ಒಂದು ಪ್ರಶ್ನೆಗೆ ಅವರಿಗೆ ಕೊಟ್ಟ ಭರವಸೆಯನ್ನು ನಾವು ಪೂರ್ತಿ ಮಾಡುವ ಹಂತದಲ್ಲಿದ್ದೇವೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿಗೆ ಸೇರಿದಂತಹ ದಸೊಡಿ ಗ್ರಾಮ ಎನಿದೆ ಹಿಂದೆ ಅಲ್ಲಿಗೆ ಪ್ರಾಥಮಿಕ ಆರೋಗ್ಯ ಘಟಕ ಮಂಜೂರಾಗಿದ್ದು ನಿಜ. ತದನಂತರ ರದ್ದಾಗಿದ್ದುದು ನಿಜ. ಅವರ ಪ್ರಶ್ನೆಯ ಹಿನ್ನೆಲೆಯಲ್ಲಿ ಮುಂದಿನ ಸಾಲಿನಲ್ಲಿ ಪರಿಶೀಲಿಸಲಾಗುವುದು ಎಂದು ಹೇಳಿದ್ದುದು ನಿಜ. ಆದರೆ ಈಗಾಗಲೇ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶೆಟ್ಟಿಗೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಪರಿವರ್ತನೆ ಮಾಡತಕ್ಕಂಥ ಒಂದು ದೊಡ್ಡ ಕಾರ್ಯವನ್ನು ಅವರ ಕ್ಷೇತ್ರಕ್ಕೆ ನಾವು ಮಾಡಿದ್ದೇವೆ. ಅವರ ಒತ್ತಾಯ ಇನ್ನು ಒಂದು ಆಗಬೇಕು ಎನ್ನುವ ಬಯಕೆ ಬಹುಶಃ ಅವರ ಕ್ಷೇತ್ರದಲ್ಲಿ ಸಾಕಷ್ಟು ವೈದ್ಯಕೀಯ ವ್ಯವಸ್ಥೆ ವೈದ್ಯಕೀಯ ಸೌಲಭ್ಯಗಳು ಒದಗಿಸಿ ಕೊಡಬೇಕೆನ್ನುವ ಒಂದು ಹಿನ್ನೆಲೆಯಲ್ಲಿ ಈ ಮಾತನ್ನು ಹೇಳಿದ್ದಾರೆ. 1992-93ನೇ ಸಾಲಿನಲ್ಲಿ ಇದ್ದಂತಹ ಗುರಿಯನ್ನು ನಾವು ಈಗಾಗಲೇ ಸಾಧಿಸಿದ್ದೇವೆ. ಪುನಃ 10 ಆರೋಗ್ಯ ಕೇಂದ್ರಗಳನ್ನು ಕೊಡತಕ್ಕಂಥಾದ್ದಕ್ಕೆ ವಿತ್ತೀಯ ಇಲಾಖೆಗೆ ನಮ್ಮ ಇಲಾಖೆಯಿಂದ ಮನವಿ ಕೂಡ ಮಾಡಿದ್ದೇವೆ. ಅದು ಮಂಜೂರಾಗಿ ಬರುವ ನಿರೀಕ್ಷೆಯಲ್ಲಿದೆ. ಅದನ್ನು ಕೂಡ ಮಂಜೂರು ಮಾಡಿ ಕೊಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ :- ಮಾನ್ಯ ಸಚಿವರ ಉತ್ತರದಿಂದ ನನಗೆ ತೃಪ್ತಿಯಾಗಿದೆ. ಇನ್ನು ಒಂದು ವಾರದಲ್ಲಿ ಕೊಡಿಸಿಕೊಡತಕ್ಕಂಥ ಪ್ರಯತ್ನ ಮಾಡಿದರೆ ನಿಜವಾಗಿಯೂ ನಾನು ನನ್ನ ಕ್ಷೇತ್ರದ ಜನರ ಪರವಾಗಿ ವಂದನೆಗಳನ್ನು ಅರ್ಪಿಸುತ್ತೇನೆ.

ಎಸ್.ಸಿ.ಎಸ್.ಟಿ. ವಿದ್ಯಾರ್ಥಿಗಳಿಗೆ ಐ.ಎ.ಎಸ್. ಪದವಿಗೆ ಟ್ರೈನಿಂಗ್.

759. - ಶ್ರೀ ಆರ್.ಬಿ. ತಿಮ್ಮಾಪುರ್ (ಮುಧೋಳ್) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ಐ.ಎ.ಎಸ್. ಪದವಿ ಪಡೆಯಲು ತರಬೇತಿ ಕೊಡುವ ಸರ್ಕಾರದ ಸಂಸ್ಥೆಗಳ ಸಂಖ್ಯೆ ಎಷ್ಟು :